**Crl. Misc.No. 233/2024** **RW-2**

**ಸಾಕ್ಷಿಯನ್ನು ಕರೆಸಲಾಯಿತು ಪ್ರಮಾಣ ವಚನ ಮಾಡಿಸಲಾಯಿತು**

**ದಿ:04-04-2026**

**ಪಾಟೀ ಸವಾಲುಃ** ಅರ್ಜಿದಾರರ ಪರ ಶ್ರೀ ಈ ಈ ಡಿ ವಕೀಲರಿಂದ

ಅರ್ಜಿದಾರರು ಮತ್ತು ನಾವು ಸಿದ್ದಯ್ಯರವರ ವಾರಸುದಾರರು ಎಂದರೆ ಸರಿಯಲ್ಲ. ನನ್ನ ಪ್ರಮಾಣ ಪತ್ರದಲ್ಲಿರುವ ಮಾಹಿತಿಗಳು ಗೊತ್ತಿಲ್ಲ. ನನ್ನ ತಾಯಿಯ ಹೆಸರು ತಿಮ್ಮಮ್ಮ ತಂದೆಯ ಹೆಸರು ಸಿದ್ದಯ್ಯ . ತಿಮ್ಮಮ್ಮ ನವರ ಮರಣ ಪ್ರಮಾಣ ಪತ್ರವನ್ನು ಪಡೆದುಕೊಂಡಿಲ್ಲ. ಅರ್ಜಿದಾರರು ತಿಮ್ಮಮ್ಮ ರವರ ಮರಣ ಪ್ರಮಾಣ ಪತ್ರ ಪಡೆದರೆ ನನ್ನ ತಕರಾರು ಇರುತ್ತದೆ. ಅವರು ಬೇರೆಯವರು ಇರುವುದರಿಂದ ಅವರಿಗೆ ನೀಡಲು ಬರುವುದಿಲ್ಲ. ನನ್ನ ತಂದೆ ಸಿದ್ದಯ್ಯ ರವರು ನನ್ನ ತಾಯಿ ತಿಮ್ಮಮ್ಮ ರವರ ಮರಣದ ನಂತರ ಕೆಂಚಮ್ಮ ರವರನ್ನು ವಿವಾಹವಾಗಿರುತ್ತಾರೆಂದರೆ ಸರಿಯಲ್ಲ. 2, 3 ಮತ್ತು ಮೋಹನ ರವರು ಸಿದ್ದಯ್ಯ ಮತ್ತು ಕೆಂಚಮ್ಮನವರ ಮಕ್ಕಳು ಇರುತ್ತಾರೆಂದರೆ ಸರಿಯಲ್ಲ. ಅರ್ಜಿದಾರರಿಗೆ ಆಸ್ತಿ ಹಕ್ಕನ್ನು ತಪ್ಪಿಸುವ ಸಲುವಾಗಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆಂದರೆ ಸರಿಯಲ್ಲ.

ಆಸ್ತಿ ಖಾತೆ ಬದಲಾವಣೆ ಮಾಡಲು ಮರಣ ಪ್ರಮಾಣ ಪತ್ರ ಅವಶ್ಯಕತೆ ಇರುತ್ತದೆ ಎಂದರೆ ಸರಿ. ಅರ್ಜಿದಾರರು ನಮ್ಮ ವಿರುದ್ದ ಹಿಸ್ಸೆಗಾಗಿ ದಾವೆ ಸಲ್ಲಿಸಿರುತ್ತಾರೆಂದರೆ ಸರಿ. ಸದರಿ ದಾವೆಯಲ್ಲಿ ನಾವು ರಾಜಿ ಅರ್ಜಿ ಸಲ್ಲಿಸಿರುತ್ತೇವೆ ಎಂದರೆ ಸರಿಯಲ್ಲ. ನನ್ನ ತಾಯಿಯ ಮರಣ ಪ್ರಮಾಣ ಪತ್ರವನ್ನು ಪಡೆಯಲು ತಪ್ಪಿಸಲು ಸುಳ್ಳು ಪ್ರಮಾಣ ಪತ್ರ ಸಲ್ಲಿಸಿರುತ್ತೇನೆಂದರೆ ಸರಿಯಲ್ಲ.

**ಉಕ್ತ ಲೇಖನದಂತೆ ಮುಕ್ತ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.**

**ಓ ಹೆ ಕೇ ಸ ಇ**

**ಸಹಿ/-**

**ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು**
**ಜೆ.ಎಂ.ಎಫ್.ಸಿ, ಸಕಲೇಶಪುರ**